ರಾಜ್ಯದಲ್ಲಿನ ನೀರಾವರಿ ಯೋಜನೆಗಳ ಗುತ್ತಿಗೆದಾರರಿಗೆ ಬಾಕಿ ಹಣ ಪಾವತಿ

3153 (3674) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002–03ನೇ ಸಾಲಿನ ಆಯವ್ಯಯದಲ್ಲಿ ನೀರಾವರಿ ಕ್ಷೇತ್ರಕ್ಕೆ ನಿಗದಿಪಡಿಸಿದ ಹಣ ಎಷ್ಟು; ಬಿಡುಗಡೆಯಾದ ಹಣ ಎಷ್ಟು;

ಆ) ಅದೇ ಸಾಲಿನಲ್ಲಿ ಹೊಸದಾಗಿ ಎಷ್ಟು ಇತರೆ ಭೂಮಿಯನ್ನು ನೀರಾವರಿ ವ್ಯಾಪ್ತಿಗೆ ತರಲು ಅಕ್ಷೇಪಿಸಲಾಗಿತ್ತು. ವಾಸ್ತವಿಕವಾಗಿ ಎಷ್ಟು ಎಕರೆ ಭೂಮಿ ನೀರಾವರಿ ವ್ಯಾಪ್ತಿಗೆ ತರಲಾಯಿತು; ನಿಗದಿತ ಗುರಿ ಸಾಧಿಸಲಾಗದಿದ್ದಕ್ಕೆ ಕಾರಣಗಳೇನು;

ಇ) 2003ರ ಮಾರ್ಚ್ ಅಂತ್ಯಕ್ಕೆ ಗುತ್ತಿಗೆದಾರರಿಗೆ ಪಾವತಿಸಬೇಕಾದ ಹಣ ಎಷ್ಟು ಬಾಕಿ ಇದೆ;

ಈ) ಏಪ್ರಿಲ್ 2003ರಿಂದ ಜೂನ್‌ವರೆಗೆ ಗುತ್ತಿಗೆದಾರರಿಗೆ ಬಾಕಿ ಹಣ ಎಷ್ಟು ಪಾವತಿ ಮಾಡಲಾಗಿದೆ?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಜಲ ಸಂಪನ್ಮೂಲ ಇಲಾಖೆಯ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ (ನಿಗಮಗಳು ಸೇರಿದಂತೆ) 2003–03ನೇ ಆಯವ್ಯಯದಲ್ಲಿ,

1. ನಿಗದಿತಪಡಿಸಲಾದ ಒಟ್ಟು ಹಣ–ರೂ. 3040.17 ಕೋಟಿಗಳು.

2. ಬಿಡುಗಡೆ ಮಾಡಲಾದ ಒಟ್ಟು ಹಣ–ರೂ. 2583.66 ಕೋಟಿಗಳು

ಆ) 2002–03ನೇ ಸಾಲಿನಲ್ಲಿ ಪ್ರಗತಿಯಲ್ಲಿರುವ ಭಾಲ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಂದ,

1. ನಿಗದಿಗೊಳಿಸಲಾದ ನೀರಾವರಿ ಕ್ಷೇತ್ರ–150634 ಹೆಕ್ಟೇರ್

2. ನೀರಾವರಿಗೊಳಪಡಿಸಿದ ಕ್ಷೇತ್ರ–84887 ಹೆಕ್ಟೇರ್

ನಿಗದಿತ ಗುರಿ ಸಾಧಿಸಲಾಗದಿದ್ದಕ್ಕೆ ಕಾರಣಗಳು ಈ ಕೆಳಗಿನಂತಿವೆ:

1. ಭೂಸ್ವಾಧೀಣ ಪ್ರಕ್ರಿಯೆಯಲ್ಲಿನ ಸಮಸ್ಯೆಗಳು

2. ಕೇಂದ್ರ ಜಲ ಆಯೋಗದ ವಿವಿಧ ನಿರ್ದೇಶನಾಲಯಗಳಿಂದ ಯೋಜನೆಗಳ ಮಂಜೂರಾತಿ ಬಾಕಿ.

3. ಯೋಜನೆಗಳ ವಿನ್ಯಾಸದಲ್ಲಿ ಬದಲಾವಣೆ

4. ಏತ ನೀರಾವರಿ ಯೋಜನೆಗಳ ಕಾಮಗಾರಿ ಅಂಶಗಳಲ್ಲಿ ವಿಳಂಬ.

ಇ) ಜಲ ಸಂಪನ್ಮೂಲ ಇಲಾಖೆಯಲ್ಲಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮಾರ್ಚ್ 2003ರ ಅಂತ್ಯಕ್ಕೆ ಗುತ್ತಿಗೆದಾರರಿಗೆ ಪಾವತಿಸಬೇಕಾದ ಒಟ್ಟು ಹಣ – ರೂ. 261.19 ಕೋಟಿಗಳು.

ಈ) ಜಲ ಸಂಪನ್ಮೂಲ ಇಲಾಖೆಯಲ್ಲಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಏಪ್ರಿಲ್ 2003ರಿಂದ ಜೂನ್ 2003ರವರೆಗೆ ಗುತ್ತಿಗೆದಾರರಿಗೆ ಪಾವತಿಸಲಾಗಿರುವ ಒಟ್ಟು ರೂ. 47.22 ಕೋಟಿಗಳು.